## ಕರ್ನಾಟಕ ಸರ್ಕಾರ

## ಆಹಾರ,ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಸಂಖ್ಯೆ:ಸಿಎಫ್‌ಎಸ್/ಎಎಂಸಿ-2/2011-2012. ದಿನಾಂಕ:21-07-2011.

## ((((( ಅಧಿಸೂಚನೆ )))))

ನಗರ-ಪಟ್ಟಣ ಪ್ರದೇಶಗಳಲ್ಲಿ ಪಡಿತರ ಚೀಟಿ ಹೊಂದಿದವರ ಮತ್ತು ರಾಜ್ಯದಲ್ಲೆಡೆ ಗೃಹ ಬಳಕೆ ಅನಿಲ ಸಂಪರ್ಕ ಹೊಂದಿದವರ ಆದ್ಯ ಗಮನಕ್ಕಾಗಿ

1. ರಾಜ್ಯದಲ್ಲಿರುವ BPL ಮತ್ತು APL ಪಡಿತರ ಚೀಟಿಗಳ ಸಂಖ್ಯೆ, ಇರಬಹುದಾದ ಕುಟುಂಬಗಳ ಸಂಖ್ಯೆಗಿಂತಲೂ ಮಿತಿ ಮೀರಿ ಹೆಚ್ಚಾಗಿದ್ದರೂ ಬಹಳ ಸಂಖ್ಯೆಯ ಕುಟುಂಬಗಳು ಪಡಿತರ ಚೀಟಿಗಳಿಂದ ವಂಚಿತರಾಗಿದ್ದಾರೆಂದು ಮನಗಂಡು, ಅಂತಹ ಅನರ್ಹ ಪಡಿತರ ಚೀಟಿಗಳನ್ನು ಕಂಡು ಹಿಡಿಯಲು ಒಂದು ಪ್ರಕ್ರಿಯೆಯನ್ನು (ಅ) ನಗರ-ಪಟ್ಟಣ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ಮತ್ತು ಗೃಹಬಳಕೆ LPG ಗ್ರಾಹಕ ಸಂಖ್ಯೆಗಳನ್ನು ಫಲಾನುಭವಿ ಗಳು ವಾಸಿಸುವ ಮನೆಯ ವಿದ್ಯುತ್ ಮೀಟರ್‌ನ RRಸಂಖ್ಯೆಗಳಿಗೆ (EM-RRಸಂಖ್ಯೆ) ಜೋಡಣೆ ಮಾಡುವ ಮೂಲಕವೂ ಮತ್ತು (ಆ) ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ಗ್ರಾಮಪಂಚಾಯತ್ ಡಾಟಾಬೇಸ್ (ಪಂಚತಂತ್ರ) ನಲ್ಲಿ ಮನೆಗಳ ಆಸ್ತಿ ತೆರಿಗೆ ಸಂಖ್ಯೆಗಳಿಗೆ ಜೋಡಣೆ ಮಾಡುವ ಮೂಲಕವೂ, ಅಂತಹ ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಲು ಕೈಗೆತ್ತಿಕೊಳ್ಳಲಾಯಿತು. ಈ ನಿಟ್ಟಿನಲ್ಲಿ ನಗರ-ಪಟ್ಟಣ ಪ್ರದೇಶಗಳ ಪಡಿತರ ಚೀಟಿ ಹೊಂದದವರು ಮತ್ತು ರಾಜ್ಯದ ಎಲ್ಲಾ ಗೃಹಬಳಕೆ LPG ಗ್ರಾಹಕರು EM-RR ಸಂಖ್ಯೆ ಪಡಿತರ ಚೀಟಿ ಸಂಖ್ಯೆ ಮತ್ತು LPG ಗ್ರಾಹಕ ಸಂಖ್ಯೆಗಳನ್ನು ಸಲ್ಲಿಸಬೇಕೆಂದು ತಿಳಿಸಲಾಗಿತ್ತು. ಅದರನ್ವಯ, ಹೆಚ್ಚಿನ ಸಂಖ್ಯೆಯಲ್ಲಿ ನಗರ-ಪಟ್ಟಣ ಪ್ರದೇಶಗಳ ಪಡಿತರ ಚೀಟಿ ಹೊಂದಿದವರು ಮತ್ತು LPG ಗ್ರಾಹಕರು EM-RR ಸಂಖ್ಯೆಗಳನ್ನು ಸಲ್ಲಿಸಿರುತ್ತಾರೆ. ಈ ರೀತಿ ಸಲ್ಲಿಸಿದ ಮಾಹಿತಿಗಳನ್ನು ಪಡಿತರ ಚೀಟಿಗಳ ತೈಲ ಕಂಪನಿಗಳು ಒದಗಿಸುವ ಗ್ರಾಹಕರ ಮಾಹಿತಿ ಮತ್ತು ವಿದ್ಯುತ್ ಕಂಪನಿಗಳು (ESCOM)ಗಳು ಒದಗಿಸುವ ಮಾಹಿತಿಯೊಂದಿಗೆ ಹೋಲಿಕೆ ಮಾಡಲಾಗಿದೆ ಮತ್ತು ರಾಜ್ಯ ಮಟ್ಟದಲ್ಲಿ ಒಂದು ಡಾಟಾಬೇಸ್ ಅನ್ನು ನ್ಯಾಷನಲ್ ಇನ್‌ಫಾರ್‌ಮಾಟಿಕ್ಸ್‌ಸೆಂಟರ್ ಅವರು ಸ್ಥಾಪನೆ ಮಾಡಿರುತ್ತಾರೆ.

2. ಮೇಲೆ ಹೇಳಿದ ಪ್ರಕ್ರಿಯೆಯ ಆಧಾರದ ಮೇಲೆ ಪಡಿತರ ಚೀಟಿಗಳನ್ನು ಮತ್ತು ಗೃಹಬಳಕೆ LPG ಸೌಲಭ್ಯಗಳನ್ನು ಮೂರು ವರ್ಗಗಳನ್ನಾಗಿ ಭೇದಿಸಲಾಗಿದೆ: **(ಅ) ಕಾನೂನುಬದ್ದ (ಆ) ಹೆಚ್ಚಿನ ತನಿಖೆ ಅಗತ್ಯವಿರುವಂತಹ ಮತ್ತು (ಇ) ಕಾನೂನು ಬಾಹಿರ.** ಪ್ರಾಥಮಿಕ ಹೆಜ್ಜೆಯಾಗಿ ಒಂದು ಪಡಿತರ ಚೀಟಿ ಅಥವಾ LPG ಸೌಲಭ್ಯ, ಒಂದು EM-RR ಸಂಖ್ಯೆಗೆ ಜೋಡಣೆಯಾದ ಪ್ರಕರಣಗಳನ್ನು ಕಾನೂನುಬದ್ಧ ಎಂದು ಪರಿಗಣಿಸಲಾಗಿರುತ್ತದೆ. ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಅಥವಾ LPG ಸಂಪರ್ಕ ಒಂದು EM-RR ಸಂಖ್ಯೆಗೆ ಜೋಡಣೆಯಾದ ಅಥವಾ ತನ್ನ ಮನೆಗೆ ESCOM ವಿದ್ಯುತ್ ಸಂಪರ್ಕ ಇರುವುದಿಲ್ಲವೆಂದು ನಿಲುವು ತಾಳಿದ ಪ್ರಕರಣಗಳ ಕಾನೂನುಬದ್ಧತೆಯನ್ನು ಸ್ಥಳ ತಪಾಸಣೆಯ ನಂತರ ನಿರ್ಣಯಿಸಲಾಗುತ್ತದೆ. ಯಾವುದೇ ಮಾಹಿತಿಯನ್ನು ಒದಗಿಸದ ಅಥವಾ ಗೃಹಯೇತರ ವಿದ್ಯುತ್ ಮೀಟರ್‌ನ R.R. ಸಂಖ್ಯೆ ಒದಗಿಸಿದ ಪ್ರಕರಣಗಳನ್ನು ಕಾನೂನುಬದ್ಧತೆಯ ಬಗ್ಗೆ ಪುರಾವೆ ಒದಗಿಸುವವರೆಗೆ, ಕಾನೂನುಬಾಹಿರ ಎಂದು ಪರಿಗಣಿಸಲಾಗುವುದು.
3. (ಅ) ಮೇಲೆ ಹೇಳಿದ ಆಕ್ಷೇಪಣೆಗಳಿಗೆ ಒಳಪಟ್ಟು EM-RR ಸಂಖ್ಯೆಗಳನ್ನು ಒದಗಿಸದೆ ಇರುವ (ಆ) ಗೃಹಯೇತರ ವಿದ್ಯುತ್ ಮೀಟರ್‌ನ R.R. ಸಂಖ್ಯೆ ಒದಗಿಸಿರುವ (ಇ) ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಅಥವಾ LPG ಗ್ರಾಹಕ ಸಂಖ್ಯೆ ಒಂದು EM-RR ಸಂಖ್ಯೆಗೆ ಜೋಡಣೆಯಾಗಿ ಫಲಾನುಭವಿ ಒಂದೇ ಆಗಿದ್ದು, ಮತ್ತು (ಉ) ಪಡಿತರ ಚೀಟಿ ಅಥವಾ LPG ಗ್ರಾಹಕ ಸಂಖ್ಯೆಯಲ್ಲಿರುವ ವಿಳಾಸ ಮತ್ತು EM-RR ಸಂಖ್ಯೆಯಲ್ಲಿ ಇರುವ ವಿಳಾಸಗಳು ಬೇರೆ ಬೇರೆ ಸ್ಥಳಗಳಲ್ಲಿ ಇರುವಂತಹ ಪ್ರಕರಣಗಳನ್ನು ಸಂದರ್ಭಕ್ಕನುಸಾರವಾಗಿ Liquefied Petroleum Gas(Regulation of Supply and Distribution ) Order 2000ನ ಕಂಡಿಕೆ 3 ಅಥವಾ Karnataka (Prevention of Unauthorized Possession of Ration Cards) Order 1977ನ ಕಂಡಿಕೆ 3 ಅಥವಾ ಎರಡು ಸೇರಿದಂತೆ ಉಲ್ಲಂಘನೆ ಮಾಡಲಾಗಿರುತ್ತದೆಯೆಂದು ಪರಿಗಣಿಸಲಾಗಿರುತ್ತದೆ. ಅಂತಹ ಫಲಾನುಭವಿಗಳ ಸೌಲಭ್ಯಗಳನ್ನು ಅಮಾನತ್ತು ಮಾಡಲು ಅಗತ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಲೋಪದೋಷಗಳು ಅಥವಾ ತಪ್ಪುಗಳು ಯಾವುದಾದರೂ ಆಗಿದ್ದಲ್ಲಿ ಡಾಟಾಬೇಸ್‌ನಲ್ಲಿ Online ಆಗಿ ಸರಿಪಡಿಸಲು ಫಲಾನುಭವಿಗಳಿಗೆ ಅನುವು ಮಾಡಿಕೊಡಲಾಗಿರುತ್ತದೆ. ತಿದ್ದುಪಡಿ ಮಾಡಿದ ನಂತರ ಸೌಲಭ್ಯ ಗಳನ್ನು ಮತ್ತೆ ಒದಗಿಸಲಾಗುವುದು.
4. ಸೌಲಭ್ಯ ನಿಲ್ಲಿಸಲ್ಪಟ್ಟ ಪಡಿತರ ಚೀಟಿಗಳು ಮತ್ತು LPG ಸೌಲಭ್ಯಗಳ ಮಾಹಿತಿಗಳನ್ನು ಸಂಬಂಧಿಸಿದ ನ್ಯಾಯಬೆಲೆ ಅಂಗಡಿಗಳಿಗೆ, LPG ವಿತರಕರಿಗೆ ಮತ್ತು ತೈಲ ಕಂಪನಿಗಳಿಗೆ ತಿಳಿಸಲಾಗಿರುತ್ತದೆ. ನ್ಯಾಯಬೆಲೆ ಅಂಗಡಿಗಳನ್ನು ಮತ್ತು LPG ವಿತರಣೆ ಏಜೆನ್ಸಿಗಳನ್ನು ನಡೆಸಲು ಪ್ರಾಧಿಕಾರ ಹೊಂದಿದವರಿಗೆ ಈ ರೀತಿ ಅಮಾನತ್ತು ಗೊಳಿಸಲ್ಪಟ್ಟ ಫಲಾನುಭವಿಗಳಿಗೆ ಆಹಾರಧಾನ್ಯ, ಸಕ್ಕರೆ, ಸೀಮೆಎಣ್ಣೆ ಮತ್ತು LPG ಸಿಲಿಂಡರ್‌ಗಳನ್ನು ನೀಡಬಾರದು ಎಂದು ನಿರ್ದೇಶಿಸಲಾಗಿರುತ್ತದೆ. ತಮ್ಮ ಸೌಲಭ್ಯದ ಸ್ಥಾನಮಾನವನ್ನು ಡಾಟಾಬೇಸ್‌ನಲ್ಲಿ ಇಲಾಖೆಯ ವೆಬ್‌ಸೈಟ್ http://ahara.kar.nic.in ಗೆ ಹೋಗಿ "click here to verify your LPG and Ration Card status and to update RR Number etc." ಅನ್ನು ಒತ್ತುವ ಮೂಲಕ ತಿಳಿದುಕೊಳ್ಳಬಹುದು.
5. ಸಲ್ಲಿಸಿದ ಮಾಹಿತಿಗಳನ್ನು ನಿಖರವಾಗಿ ದಾಖಲಿಸಲು ಮತ್ತು ಮಾಸ್ಟರ್ ಡಾಟಾಬೇಸ್ ನಲ್ಲಿರುವ ಮಾಹಿತಿಗಳಿಗೆ ಹೋಲಿಕೆ ಮಾಡಲು ಸಾಕಷ್ಟು ಪ್ರಯತ್ನ ಮಾಡಲಾಗಿರುತ್ತದೆ. ಆದರೂ ಸಹ, ತಪ್ಪು, ಅಸಂಪೂರ್ಣ ಮಾಹಿತಿ

ಸಲ್ಲಿಸಿರುವುದರಿಂದ, ಡಾಟಾ ಎಂಟ್ರಿ ಮಾಡುವಲ್ಲಿ ತಪ್ಪಾಗಿರುವುದರಿಂದ ಅಥವಾ ಮಾಸ್ಟರ್ ಡಾಟಾಬೇಸ್‌ಗಳಲ್ಲಿ ಮಾಹಿತಿ ಇಲ್ಲದೆ ಇರುವುದರಿಂದ ಜೋಡಣೆಯಾಗದೆ ಇರುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ. ಅಂತಹ ಪ್ರಕರಣಗಳಲ್ಲಿಯೂ ಸಹ ಸೌಲಭ್ಯವನ್ನು ಅಮಾನತ್ತುಗೊಳಿಸಿರುವ ಸಾಧ್ಯತೆ ಇರುತ್ತದೆ. ಅಂತಹ ಫಲಾನುಭವಿಗಳಿಗೆ ಆಗಿರಬಹುದಾದ ತೊಂದರೆಗಳಿಗಾಗಿ ವಿಷಾದಿಸಲಾಗಿದೆ. ಸರಿಯಾಗಿ ಮಾಹಿತಿ ಸಲ್ಲಿಸಿದ ನಂತರವೂ ಯಾವುದಾದರೂ ಫಲಾನುಭವಿಯ ಪಡಿತರ ಚೀಟಿ ಅಥವಾ LPG ಸಂಪರ್ಕ ತಪ್ಪಾಗಿ ನಿಲ್ಲಿಸಲ್ಪಟ್ಟಿದ್ದಲ್ಲಿ, ಈ ಕೆಳಗಿನಂತೆ ಕ್ರಮಕೈಗೊಳ್ಳುವ ಮೂಲಕ ಮರು ಪಡೆಯಬಹುದು.

(ಅ) BPL ಪಡಿತರ ಚೀಟಿ ಹೊಂದಿದವರು ತಮ್ಮ ಪಡಿತರ ಚೀಟಿಯ, LPG ಡೆಲಿವರಿ ಬಿಲ್‌ನ ಮತ್ತು ವಿದ್ಯುತ್ ಮೀಟರ್ ಬಿಲ್‌ನ ಫೋಟೋ ಪ್ರತಿಗಳನ್ನು ಸಂಬಂಧಿಸಿದ ನ್ಯಾಯಬೆಲೆ ಅಂಗಡಿ ನಡೆಸುವವರಿಗೆ ಸಲ್ಲಿಸಿ ಪಾವತಿ ಪಡೆಯುವುದು ಅಥವಾ ಕೆಳಗೆ(ಆ)ನಲ್ಲಿ ಹೇಳಿದಂತೆ ಮಾಹಿತಿಯನ್ನು ಕಂಪ್ಯೂಟರ್‌ಗೆ ದಾಖಲಿಸಬಹುದು.

(ಆ) APL ಪಡಿತರ ಚೀಟಿ ಮತ್ತು BPL ಆಗಿರದ LPG ಗ್ರಾಹಕರು, ಮೇಲೆ(ಅ) ನಲ್ಲಿ ಹೇಳಿದ ದಾಖಲಾತಿಗಳನ್ನು ಇಲಾಖೆಯ ವೆಬ್‌ಸೈಟ್ http://ahara.kar.nic.in ಗೆ ಹೋಗಿ ಅಲ್ಲಿ ಕಂಡುಬರುವ "click here to verify your LPG and Ration Card status and to update RR Number etc." ಲಿಂಕೇಜ್ ಮೇಲೆ ಕ್ಲಿಕ್ ಮಾಡಿ, ಅಲ್ಲಿ ನೀಡಿದ ಸೂಚನೆಯಂತೆ ಮಾಹಿತಿಯನ್ನು ಸಲ್ಲಿಸಬಹುದು. ಬಯಸಿದ ಮಾಹಿತಿಯನ್ನು ಸಲ್ಲಿಸಿದ ಕೂಡಲೇ ಒಂದು ಪಾವತಿಯನ್ನು ಕಂಪ್ಯೂಟರ್ ಸ್ವಯಂಚಾಲಿತವಾಗಿ ನೀಡುತ್ತದೆ. ಈ ಸೌಲಭ್ಯ ಮುಂದಿನ 15ದಿನಗಳವರೆ ಲಭ್ಯವಿರುತ್ತದೆ. ಯಾವುದೇ ಫಲಾನುಭವಿಗೆ ಈ ಮೇಲಿನಂತೆ ಮಾಹಿತಿಯನ್ನು ಕಂಪ್ಯೂಟರ್‌ಗೆ ದಾಖಲಿಸುವುದು ಕಷ್ಟ ಸಾಧ್ಯವೆಂದು ಕಂಡುಬಂದರೆ ಅವರು ತಮ್ಮ ಹತ್ತಿರದ ಉಪ ನಿರ್ದೇಶಕರ ಕಛೇರಿಗೆ ಹೋಗಿ ಸಲ್ಲಿಸಬಹುದು. ಉಪ ನಿರ್ದೇಶಕರುಗಳ ವಿಳಾಸಗಳನ್ನು ವೆಬ್‌ಸೈಟ್‌ನಿಂದ ಪಡೆಯಬಹುದು.

6. ಗ್ರಾಮೀಣ ಪ್ರದೇಶಗಳಲ್ಲಿ, ಗ್ರಾಮಪಂಚಾಯತ್ ಆಸ್ತಿ ತೆರಿಗೆ ಡಾಟಾಬೇಸ್‌ನಲ್ಲಿ ಪಡಿತರ ಚೀಟಿಗಳನ್ನು ಹೊಂದಾಣಿಕೆ ಮಾಡುವ ಮೂಲಕ ಅನರ್ಹ ಪಡಿತರ ಚೀಟಿಗಳನ್ನು ಕಂಡುಹಿಡಿಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ನಗರ-ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ಫಲಾನುಭವಿಗಳ ರಾಜ್ಯಮಟ್ಟದ ಡಾಟಾಬೇಸ್ ಪರಿಷ್ಕರಣೆ ಕೆಲಸ ಮುಗಿದ ಕೂಡಲೇ, ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ಒಂದು ಊರಿನಿಂದ ಇನ್ನೊಂದು ಊರಿಗೆ ಬದಲಾಯಿಸಲು ಮತ್ತು ಮಾಹಿತಿಯನ್ನು ತಿದ್ದುಪಡಿ ಮಾಡಲು Online ಸೌಲಭ್ಯವನ್ನು ಒದಗಿಸಲಾಗುವುದು. ಯಾವುದೇ ದೂರು-ಅಸಮಧಾನ ಇದ್ದಲ್ಲಿ ಅದನ್ನು foodcom-ka@nic.in ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

ಆಯುಕ್ತರು,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

Government of Karnataka

**Department of Food, Civil Supplies and Consumer Affairs**

No:CFS/AMC-2/2011-12. Dated:21-07-2011.

# ((((( NOTIFICATION )))))

## For the kind attention of ration card holders in urban areas and all domestic LPG beneficiaries of the State.

1. Upon realisation that the number of BPL and APL ration cards far exceeded the number of families in the State and yet large number of families went without ration cards, an exercise was initiated to identify such ineligible cards (a) in urban areas, by linking the ration cards and the domestic LPG consumer numbers to the electricity meter RR numbers of the houses in which the beneficiaries resided (EM-RR number) and (b) in rural areas, by linking ration cards to property tax numbers of the houses in the Gram Panchayath database (panchathantra). In furtherance of that, the ration card holders of urban areas and the domestic LPG consumers all over the State were asked to furnish EM-RR numbers, along with the ration card numbers, and the LPG Consumer numbers. In response to that, most of the ration card holders of urban areas and LPG consumers have furnished the EM-RR numbers. The particulars so furnished have been matched with the original data of ration cards, the consumer data furnished by the oil companies and the electricity supply companies (ESCOMs) and a state level database has been set up by the National Informatics Centre.
2. On the basis of the above said exercise, the ration cards and domestic LPG Connections have been classified into three categories: **a) lawful, b) requiring further investigation, and c) unlawful**. As an initial step, cases wherein a single ration card or LPG connection is linked to a domestic electricity meter

RR number are considered as lawful. Lawfulness of cases wherein more than one ration card or LPG connection is linked to an EM-RR number or claim is made that the house does not have electricity supply from an ESCOM will be decided after local inspection. Cases wherein no information is furnished or non-domestic electricity meter numbers are furnished are considered to be unlawful, until better proof of residence is produced.

3. Cases wherein(a) EM-RR numbers have not been furnished, with the exception as stated above, (b) non-domestic electricity meter numbers are furnished,(c) more than one ration card or LPG consumer numbers are linked to one EM-RR number and the beneficiaries are the same, and (d) the address in the ration card or the domestic LPG connection and the address in the electricity meter RR number are in two different places; are considered to have violated either clause 3 of Liquefied Petroleum Gas(Regulation of Supply and Distribution ) Order 2000 or clause 3 of Karnataka (Prevention of Unauthorised Possession of Ration Cards) Order 1977 or both, as the case may be. Necessary steps to suspend service to those beneficiaries have been taken. Option to carry out rectification of wrongs or mistakes, if any, in the database by the beneficiary, online, is provided. Service will be restored if found lawful upon rectification.
4. Particulars of the ration cards and the LPG connections, service in respect of which has been ordered to be suspended, have been communicated to the respective fair price shops, LPG distributors and the Oil Companies. The persons authorised to run the FPS and the LPG distribution agencies have been asked not to supply food grains, sugar, kerosene and LPG cylinders to such suspended beneficiaries. The beneficiaries are requested to find out about the status of their benefit by visiting the department website http://ahara.kar.nic.in and then by clicking the link "click here to verify your LPG and Ration Card status and to update RR Number etc." if required.
5. Best possible efforts have been made to enter the date furnished correctly and match them to the master databases. Even then, mis-match because of wrong or incomplete date furnished or error in data entry or missing data in the master data base etc., cannot be ruled out. In such cases also the benefit would have been suspended. The hardship that might have been caused to such beneficiaries is regretted. Any beneficiary who had furnished the information sought and whose ration card or LPG connection has been wrongly cancelled may avail it again in the following manner.

(a) In case of BPL card holders, the beneficiaries may approach the person authorised to run the FPS and hand over photo copies of the ration card. LPG delivery bill and electricity bill and ask for an acknowledgment or may upload data as explained in (b) below.

(b) In case of APL card holders and LPG consumers who are not BPL card holders, the beneficiaries may log on to the departments website http://ahara.kar.nic.in , click the link "click here to verify your LPG and Ration Card status and to update RR Number etc.", to rectify the mistake, if any and upload the documents mentioned in (a) above by following the instructions therein. Once, the particulars sought are furnished, the computer will automatically respond to the request by generating an acknowledgment. This facility will be available for the next 15days. If a beneficiary finds uploading data through the web-site inconvenient, then he/she may approach the nearest office of a deputy director of the department for assistance. Their addresses may be had from the website.

6. In rural areas, a separate exercise to identify ineligible ration cards using property tax data base of gram panchayaths is in progress. Soon after consolidation of the State level data base of urban and rural beneficiaries, submission of online applications for new ration cards, transfer from one place to another, correction of data etc., will be facilitated. Grievance if any may be mailed to e-mail: foodcom-ka@nic.in

Commissioner
for Food, Civil Supplies
And Consumer Affairs.